**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ**

**ಸಿ.ಸಿ.241–16**

| | | |
|---|---|---|
| ಹೆಸರು | ನಾರಾಯಣಸ್ವಾಮಿ | ಪ್ರಾ.ಸಾ.1 |
| ತಂದೆಯ ಹೆಸರು | ದೊಡ್ಡಣ್ಣ | ಚಾ.ಸಾ.1 |
| ವಯಸ್ಸು | 40ವರ್ಷ | |
| ಕೆಲಸ | ಕೂಲಿ | ಸಾ.ಪ್ರ.ವ.ಬೋ |
| ಹಾಲಿ ವಾಸ | ತಗ್ಲಿಹೊಸಹಳ್ಳಿ | ದಿ:01.08.2018 |

**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :–**

ಚಾ.ಸಾ. 2 ಮತ್ತು 3 ಗೊತ್ತು. ದಿ: 19.09.2015 ರಂದು ಸಂಜೆ 6.00 ಗಂಟೆ ಸಮಯದಲ್ಲಿ ಆರೋಪಿಗಳು ನಮ್ಮ ಹಿತ್ತಲಲ್ಲಿರುವ ಸೋರೆಕಾಯಿ ಗಿಡಕ್ಕೆ ಹಸುಗಳನ್ನು ಬಿಟ್ಟಿದ್ದರು ಅದನ್ನು ಕೇಳಿದಕ್ಕೆ 1 ರಿಂದ 4ನೇ ಆರೋಪಿಗಳು ನನ್ನ ಮೇಲೆ ಹಲ್ಲೆ ಮಾಡಿದ್ದು, 1ನೇ ಆರೋಪಿಯು ದೊಣ್ಣೆಯಿಂದ ನನ್ನ ತಲೆಗೆ ಹೊಡೆದು ಗಾಯಪಡಿಸಿರುತ್ತಾನೆ. ಆಗ ನನಗೆ ಪ್ರಜ್ಞೆ ತಪ್ಪಿರುತ್ತದೆ. ಚಾ.ಸಾ. 5 ರವರು ಬಂದು ಜಗಳ ಬಿಡಿಸಿರುತ್ತಾರೆ. ನಂತರ ನಾನು ಹೊಸಕೋಟೆ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಈಗ ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಆ ದಿನ 1ನೇ ಆರೋಪಿ ಹಲ್ಲೆ ಮಾಡಿದ್ದ, ದೊಣ್ಣೆಯು ಈಗ ನ್ಯಾಯಾಲಯದ ಮುಂದಿದ್ದು, ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಈ ವಿಚಾರವಾಗಿ ನಾನು ಪೊ.ಠಾಣೆಗೆ ಹೋಗಿದ ದೂರು ನೀಡಿದ್ದು. ಸದರಿ ದೂರನ್ನು ಈಗ ನೋಡುತ್ತಿದ್ದು ಗುರುತಿಸಿರುತ್ತೇನೆ. ದೂರನ್ನು ನಿಪಿ 1 ಎಂದು, ಸಾಕ್ಷಿ ಸಹಿಯನ್ನು 1(ಎ) ಎಂದು ನಿಶಾನಿಸಿಕೊಳ್ಳಯಿತು.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

ದೂರನ್ನು ಪೊಲೀಸರು ನನ್ನ ಹೇಳಿಕೆಯ ಆಧಾರದ ಮೇರೆಗೆ ಬರೆದುಕೊಂಡಿರುತ್ತಾರೆ. ದೂರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಚಾ.ಸಾ.ದ 3 ರವರು ಭೋದನಹೊಸಹಳ್ಳಿ ವಾಸಿ ಎಂದರೆ ಸರಿ. ನಾನು ಆಸ್ಪತ್ರೆಗೆ ಹೋದಾಗ ಸಮಯ ರಾತ್ರಿ 8.30 ಆಗಿತ್ತು. ನಮ್ಮ ಊರಿನಿಂದ ಆಸ್ಪತ್ರೆ 2–3 ಕಿ.ಮಿ ಅಂತರವಿದೆ. ಆ ದಿನ ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ:ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,ಹೊಸಕೋಟೆ.**

## <u>ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ</u>

## <u>ಸಿ.ಸಿ.241–16</u>

| | | |
|---|---|---|
| ಹೆಸರು | ಆನಂದ | ಪ್ರಾ.ಸಾ.2 |
| ತಂದೆಯ ಹೆಸರು | ಬೋಳಪ್ಪ | ಚಾ.ಸಾ.3 |
| ವಯಸ್ಸು | 32ವರ್ಷ | |
| ಕೆಲಸ | ವ್ಯಾಪಾರ | ಸಾ.ಪ್ರ.ವ.ಬೋ |
| ಹಾಲಿ ವಾಸ | ಭೋದನಹೊಸಹಳ್ಳಿ | ದಿ:01.08.2018 |

**<u>ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :–</u>**

ಚಾ.ಸಾ. 1, ಮತ್ತು 2 ಗೊತ್ತು. 2015ನೇ ಸಾಲಿನಲ್ಲಿ ನಾನು ತಗ್ಲಿಹೊಸಹಳ್ಳಿಗೆ ನಮ್ಮ ಅಕ್ಕನ ಮನೆಗೆ ಹೋಗಿದ್ದಾಗ ಚಾ.ಸಾ. 1 ಮತ್ತು ಆರೋಪಿಗಳ ನಡುವೆ ಸೋರೆಕಾಯಿ ಗಿಡಕ್ಕೆ ಹಸುಗಳನ್ನು ಬಿಟ್ಟಿದ್ದ ವಿಚಾರವಾಗಿ ಗಲಾಟೆ ಆಗಿದ್ದು, ಆರೋಪಿಗಳು ಚಾ.ಸಾ. 1 ರವರ ಮೇಲೆ ಹಲ್ಲೆ ಮಾಡಿದ್ದು, 1ನೇ ಆರೋಪಿಯು ಚಾ.ಸಾ. 1 ರವರ ತಲೆಗೆ ದೊಣ್ಣೆಯಿಂದ ಹೊಡೆದು ರಕ್ತಗಾಯಪಡಿಸಿರುತ್ತಾನೆ. ನಂತರ ಚಾ.ಸಾ. 1 ರವರನ್ನು ಹೊಸಕೋಟೆ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಈ ವಿಚಾರವಾಗಿ ಪೊಲೀಸರು ಮರುದಿನ ಸ್ಥಳಕ್ಕೆ ಬಂದು ಮಹಜರು ಕ್ರಮ ಜರುಗಿಸಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಮಹಜರನ್ನು ನಿಪಿ 2 ಎಂದು, ಸಾಕ್ಷಿ ಸಹಿಯನ್ನು 2(ಎ) ಎಂದು ನಿಶಾನಿಸಿಕೊಳ್ಳಯಿತು.ಮಹಜರು ಸಮಯದಲ್ಲಿ 1 ನಿಲಗಿರಿ ದೊಣ್ಣೆಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಆಗ ನಾನು ಮತ್ತು ಚಾ.ಸಾ. 3 ಮತ್ತು 4 ರವರು ಸ್ಥಳದಲ್ಲಿದ್ದು, ಮಹಜರಿಗೆ ಸಹಕರಿಸಿರುತ್ತೇವೆ. ಆ ದಿನ ನಮ್ಮ ಸಮಕ್ಷಮ ಅಮಾನತ್ತು ಪಡಿಸಿಕೊಂಡಿದ್ದ ದೊಣ್ಣೆಯನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದು, ಗುರುತಿಸುತ್ತೇನೆ. ಅದನ್ನು ಮು.ಮಾ 1 ಎಂದು ನಿಶಾನಿಸಿಕೊಳ್ಳಲಾಯಿತು. ಈ ವಿಚಾರವಾಗಿ ನಾನು ತನಿಖಾಧೀಕಾರಿ ಮುಂದೆ ಹೇಳಿಕೆ ನೀಡಿರುತ್ತೇನೆ. ಆ ದಿನ ಚಾ.ಸಾ. 1 ರವರ ಮೇಲೆ ಹಲ್ಲೆ ಮಾಡಿದ ಆರೋಪಿಗಳನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದು, ಗುರುತಿಸಿರುತ್ತೇನೆ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

ಮಹಜರು ಸಮಯದಲ್ಲಿ ಹಾಜರಾಗುವಂತೆ ಪೊಲೀಸರು ನನಗೆ ಲಿಖಿತ ನೋಟಿಸ್ಸನ್ನು ನೀಡಿದ್ದರು ಎಂದರೆ ಸರಿಯಲ್ಲ. ನಿಪಿ. 2 ಕ್ಕೆ ನಾನು ಪೊ.ಠಾಣೆಯಲ್ಲಿ ಸಹಿ ಮಾಡಿದ್ದೇ ಎಂದರೆ ಸರಿಯಲ್ಲ. ಮಹಜರು ದಿನಾಂಕ ಹೇಳಲಾಗುವುದಿಲ್ಲ. ಮಹಜರಿಗೆ ನನ್ನ ಜೊತೆಯಲ್ಲಿ ವೆಂಕಟೇಷಪ್ಪ, ನಾರಾಯಣಪ್ಪ ಮತ್ತು ಲಕ್ಷ್ಮಿ ಎಂದು ಹೇಳಿರುತ್ತಾರೆ. ಮಹಜರು ಸ್ಥಳದ ಚಕ್ಕುಬಂದಿ ಹೇಳಲಾಗುವುದಿಲ್ಲ. ಸದರಿ ಮಹಜರನ್ನು ಬೆಳ್ಳಿಗ್ಗೆ 8.00 ಗಂಟೆಗೆ ಬರೆಯಲಾಗಿರುತ್ತದೆ.

ನ್ಯಾಯಾಲಯದ ಮುಂದಿರುವಂತಹ ದೊಣ್ಣೆ ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿಯಲ್ಲ. ಚಾ.ಸಾ. 1 ನನ್ನ ಸಂಬಂಧೀಕರು ಎಂದರೆ ಸರಿಯಲ್ಲ. ಚಾ.ಸಾ. 1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು: ಸಮಂಜಸ ಕಾರಣ ಇಲ್ಲದ್ದರಿಂದ ಸಮಯವನ್ನು ನೀಡಲಿಲ್ಲ.

ಮರುವಿಚಾರಣೆ:ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,ಹೊಸಕೋಟೆ.**